
# ಟಿಪ್ಪು ಸುಲ್ತಾನ್

**ಆಳ್ವಿಕೆ:- 29 December 1782 – 4 May 1799**

ಸಿಂಹಾಸನಾರೂಢನಾಗಿರುವ ಟಿಪ್ಪು



# ಗಮನವಿಟ್ಟು ಓದಿಕೊಳ್ಳಿರಿ

- **ತಾಯಿ: ಫಾತಿಮಾ ಫಕ್ರ್-ಉನ್-ನೀಸಾ**
- **ಜನನ: 2೦ ನವೆಂಬರ್ ೧೭೫3, ದೇವನಹಳ್ಳಿ, ಬೆಂಗಳೂರು ಗ್ರಾ.ಜಿ.**
- **ಪೂರ್ಣ ಹೆಸರು: ಬಾದಶಹಾ ನಾಜಿಬುದ್ದೌಲ ಸುಲ್ತಾನ್ ಫತೆ ಅಲಿ Bahadur ಸಾಹಾಬ್ ಟಿಪ್ಪು**
- **ಪಟ್ಟಾಭಿಷೇಕ: 29 December 1782**
- **ಪೂರ್ವಾಧಿಕಾರಿ: ಹೈದರ್ ಅಲಿ**
- **ಮರಣ: 4 ಮೆ, 1799 (48ನೆ ವಯಸ್ಸಿನಲ್ಲಿ)**
- **ಉತ್ತರಾಧಿಕಾರಿ: ?**
- **ಸಮಾಧಿ: ?**

# ಬಾಲ್ಯ ಜೀವನ

- ಬಹುಕಾಲ ಮಕ್ಕಳಿಲ್ಲದ ಅಲಿ ದಂಪತಿಗಳು ಹಜರತ್ ಟಿಪ್ಪು ಮಸ್ತಾನ್ ಎಂಬ ಮುಸ್ಲಿಂ ಸಂತನ ಸೇವೆ ಮಾಡಿ ಇವನನ್ನು ಪಡೆದರು: ಮಗನಿಗೆ ಅಬುಲ್ ಫತೆ ಟಿಪ್ಪು ಸಾಹೇಬ್ ಎಂಬ ನಾಮಕರಣ
- ತಂದೆ ಅನಕ್ಷರಸ್ಥನಾಗಿದ್ದರೂ ಮಗನಿಗೆ ಸೂಕ್ತವಾದ ಶಿಕ್ಷಣ
- ಟಿಪ್ಪುವಿಗೆ ಅರಬ್ಬಿ, ಪಾರ್ಸಿ, ಉರ್ದು, ಕನ್ನಡ ಭಾಷೆಗಳ ಪರಿಚಯ.
- ಕುದುರೆ ಸವಾರಿ ಮತ್ತು ಸಮರ ವಿದ್ಯೆಯಲ್ಲೂ ನಿಷ್ಣಾತ.
- ಹದಿನೈದನೆಯ ವಯಸ್ಸಿನಿಂದಲೇ ತಂದೆಯೊಂದಿಗೆ ಅನೇಕ ಯುದ್ಧಗಳಲ್ಲಿ ಭಾಗಿ.
- ಒಂದನೆಯ ಆಂಗ್ಲೊ-ಮೈಸೂರು ಯುದ್ಧದಲ್ಲೂ, ಮರಾಠರೊಡನೆ ನಡೆದ ಯುದ್ಧದಲ್ಲೂ (1769-72) ಭಾಗವಹಿಸಿ ಸಾಮರ್ಥ್ಯದ ಪ್ರದರ್ಶನ.

# ದರಿಯಾ ದೌಲತ್ ಅರಮನೆ



# ಎರಡನೇ ಆಂಗ್ಲೊ-ಮೈಸೂರು ಯುದ್ಧದಲ್ಲಿ

- **1780**ರಲ್ಲಿ ಆರಂಭ; ಕರ್ನಲ್ ಬೈಲಿಯನ್ನು ಪರಾಭವಗೊಳಿಸುವುದರಲ್ಲಿ ತಂದೆಗೆ ಸಹಾಯ.
- **1782**ರಲ್ಲಿ ತಂಜಾವೂರಿನಲ್ಲಿ ನಡೆದ ಕದನದಲ್ಲಿ ಬ್ರೇತ್‌ವೇಟ್ ಇವನಿಂದ ಸೋತ.
- ಮಲಬಾರ್ ಪ್ರದೇಶದಲ್ಲಿ  ಇಂಗ್ಲಿಷರ ಆಕ್ರಮಣ - ಅಲ್ಲಿಗೆ ಹೋದ.
- ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ, ಹೈದರ್ ತೀರಿಕೊಂಡನೆಂಬ ಸುದ್ದಿ.
- ಹೈದರನ ಶಿಬಿರಕ್ಕೆ ಕೂಡಲೇ ಪ್ರಯಾಣ - ಅಲ್ಲಿಯ ನೇತೃತ್ವ ವಹಿಸಿಕೊಂಡ.
- **88,000** ಸೈನಿಕರಿದ್ದ ಸೈನ್ಯ, ಮೂರು ಕೋಟಿ ರೂಪಾಯಿಗಳ ಖಜಾನೆ - ಹೈದರನ ಆಪ್ತನಾದ ಪೂರ್ಣಯ್ಯನಿಂದ ಒಪ್ಪಿಗೆ,
- ಸರ್ವಾಧಿಕಾರಿಯ ಪಟ್ಟ

# ಪೊಲ್ಲಿಲೂರು ಕದನದ ದೃಶ್ಯ



# ಅಧಿಕಾರಕ್ಕೆ ಬಂದಾಕ್ಷಣದ ಜವಾಬ್ದಾರಿ ಏನು?

- ಇಂಗ್ಲಿಷರೊಡನೆ ಯುದ್ಧವನ್ನು ಮುಂದುವರಿಸಿದ.
- ಜನರಲ್ ಸ್ಟೂಯರ್ಟನ ಸೇನೆ ಮುಂದುವರಿಯುತ್ತಿದ್ದ ಸುದ್ದಿಯನ್ನು ತಿಳಿದು ಅವನ ಮೇಲೆ ಕದನ ನಡೆಸಿ ಅವನನ್ನು ವಾಂಡಿವಾಷ್ ಬಳಿ ಸೋಲಿಸಿದ.
- ಪಶ್ಚಿಮ ಕರಾವಳಿಯಲ್ಲಿ ಇಂಗ್ಲಿಷರು ಆಕ್ರಮಣ ಮುಂದುವರಿಸುತ್ತಿದ್ದ ಸುದ್ದಿ ತಿಳಿದು ಅಲ್ಲಿಗೆ ಹೋಗಿ ಹಲವು ಪ್ರದೇಶಗಳನ್ನು ಮತ್ತೆ ಗೆದ್ದು ಇಂಗ್ಲಿಷರ ವಶದಲ್ಲಿದ್ದ ಮಂಗಳೂರು ಬಂದರನ್ನು ಬಿಡಿಸಿಕೊಂಡ.
- ಕೊನೆಗೆ ಇಂಗ್ಲಿಷರೂ ಟಿಪ್ಪುವೂ ಪರಸ್ಪರ ಹಿಡಿದುಕೊಂಡಿದ್ದ ಪ್ರದೇಶಗಳನ್ನು ಹಿಂದಿರುಗಿಸಬೇಕೆಂದು 1784ರ ಮಾರ್ಚ್ 11 ರಂದು ಮಂಗಳೂರು ಒಪ್ಪಂದವಾಯಿತು.

# ಸ್ಥಾನಭದ್ರತೆಗೆ ಕ್ರಮಗಳು

- ಅಧಿಕಾರಕ್ಕೆ ಬಂದಕೂಡಲೇ ದೈವದತ್ತ ಸರ್ಕಾರ ಎಂದು ಘೋಷಿಸಿ, ಬಾದಷಹನೆಂಬ ಬಿರುದು ಧಾರಣೆ
- ಮೈಸೂರು ದೊರೆಗಳಿಗೆ ಮೀಸಲಾಗಿದ್ದ 21 ತೋಪುಗಳ ಮರ್ಯಾದೆಯನ್ನೂ ನಜರನ್ನೂ ಸ್ವೀಕಾರ; ಸ್ವತಂತ್ರ ಸುಲ್ತಾನನೆಂದು ಘೋಷಣೆ.
- ವಿರೋಧಿಸಿದ ಪಿತೂರಿ ಮಾಡಿದ ಅಂಚೆ ಶಾಮಯ್ಯನನ್ನೂ ಅನಂತರ ತೋಷಿಖಾನೆ ಕೃಷ್ಣರಾಯನನ್ನೂ ಕೊಲ್ಲಿಸಿದ.
- ತಿರುಮಲರಾಯನ ಮೂಲಕ ಮಹಾರಾಣಿ ಲಕ್ಷ್ಮಮ್ಮಣ್ಣಿ ಇಂಗ್ಲಿಷರೊಡನೆ ಸಂಧಾನ ನಡೆಸುತ್ತಿರುವಳೆಂದು ಕೇಳಿ ಮೈಸೂರು ಅರಮನೆಯಲ್ಲಿ ಇದ್ದ ರಾಣಿಯನ್ನೂ ರಾಜಕುಮಾರ ಕೃಷ್ಣರಾಜನನ್ನೂ ಶ್ರೀರಂಗಪಟ್ಟಣದಲ್ಲಿ ಇರಿಸಿದ.

# ಸ್ಥಾನಭದ್ರತೆಯ  ನಂತರ

- ಇಂಗ್ಲಿಷರೊಡನೆ ಯುದ್ಧ ನಡೆಸಬೇಕಾಗಿ ಬಂದಿದ್ದ ಪರಿಸ್ಥಿತಿಯ ದುರುಪಯೋಗವನ್ನು ಪಡೆದುಕೊಂಡ ಅನೇಕ ಪಾಳೆಯಗಾರರು ಸ್ವತಂತ್ರರಾಗಲು ಯತ್ನ.
- ಅವರನ್ನು ಏನು ಮಾಡಬೇಕು?
- ಮಂಜರಾಬಾದಿನ ಬಳಿಯ ಬಲಮ್ ರಾಜನನ್ನೂ ಕೊಡಗಿನಲ್ಲಿ ಎದ್ದಿದ್ದ ಪ್ರತಿಭಟನೆಯನ್ನೂ ಅಡಗಿಸುವುದು ಕಷ್ಟವಾಗಲಿಲ್ಲ.
- ಆದರೆ ಕಪ್ಪ ಕೊಡದಿದ್ದ ನರಗುಂದದ ದೇಸಾಯಿಯನ್ನು ಮಣಿಸುವುದಕ್ಕೆ ಯತ್ನಿಸಿದಾಗ ಅವನಿಗೆ ಬೆಂಬಲವಾಗಿದ್ದ ಮರಾಠರನ್ನು ಕೆಣಕಿದಂತಾಯಿತು.
- ಮರಾಠರಿಂದ ಹೈದರ್ ಗೆದ್ದುಕೊಂಡಿದ್ದ ಕೃಷ್ಣಾನದಿಯ ದಕ್ಷಿಣದ ಭಾಗವನ್ನು ಮತ್ತೆ ವಶಪಡಿಸಿಕೊಳ್ಳಲು ಸಮಯ ಕಾಯುತ್ತಿದ್ದ ನಾನಾ ಫಡ್ನವೀಸ್ ಹೈದರಾಬಾದಿನ ನಿಜಾಮನೊಂದಿಗೆ ಒಂದು ಒಡಂಬಡಿಕೆ ಮಾಡಿಕೊಂಡ.

# ಮುಂದೇನಾಯಿತು?

- ಮಿತ್ರ ಸೈನ್ಯಗಳು **1786**ರ ಮೇ **1**ರಂದು ಬಾದಾಮಿ ಮತ್ತು ಇತರ ಗಡಿಪ್ರದೇಶಗಳನ್ನು ಆಕ್ರಮಿಸಿದವು.
- ಟಿಪ್ಪು ಕೂಡಲೇ ಭಾರಿ ಸೇನೆಯೊಂದಿಗೆ ಅತ್ತ ಸಾಗಿ ಆದೋನಿಯನ್ನು ಆಕ್ರಮಿಸಿಕೊಂಡು ತುಂಗಭದ್ರೆಯನ್ನು ದಾಟಿ ಮುಂದುವರಿದ.
- ಒಂಬತ್ತು ತಿಂಗಳುಗಳ ಕಾಲ ನಡೆಸಿದ ಕದನದಲ್ಲಿ ಇವನದೇ ಮೇಲುಗೈ ಆಗಿತ್ತು.

# ಮೈಸೂರಿನ ಫಿರಂಗಿ



# ಅನಿರೀಕ್ಷಿತ ಘಟನೆ!

- ಮಂಗಳೂರು ಕೌಲಿನಿಂದ ತಮಗೆ ಅವಮಾನವಾಯಿತೆಂದು ಭಾವಿಸಿದ್ದ ---ರು ಟಿಪ್ಪುವಿನೊಂದಿಗೆ ಯುದ್ಧಕ್ಕಾಗಿ ಕಾಲುಕೆರೆಯುತ್ತಿದ್ದರು.
- ಈ ಸಮಯದಲ್ಲಿ ಮರಾಠರೊಂದಿಗೂ ನಿಜಾಮನೊಂದಿಗೂ ವಿರಸ ಬೆಳೆಸುವುದು ತರವಲ್ಲವೆಂದು ಟಿಪ್ಪು ಭಾವಿಸಿದ.
- ಇಂಗ್ಲಿಷರನ್ನು ಸೋಲಿಸಿ ಓಡಿಸಲು ತಾವೆಲ್ಲ ಒಗ್ಗಟ್ಟಿನಿಂದ ಇರಬೇಕೆಂಬ ಉದ್ದೇಶದಿಂದ ಅವರೊಂದಿಗೆ ಒಪ್ಪಂದ ಮಾಡಿಕೊಂಡು ನರಗುಂದ, ಕಿತ್ತೂರು ಮತ್ತು ಬಾದಾಮಿಯನ್ನು ಅವರಿಗೆ ಒಪ್ಪಿಸಿದ.
- ಆದರೆ ಟಿಪ್ಪುವಿನ ಬಲವನ್ನು ಮುರಿಯಬೇಕೆಂದು ಇಂಗ್ಲಿಷರು ಹೊಂಚು ಕಾಯುತ್ತಲೇ ಇದ್ದರು.

# ಮೂರನೆ ಆಂಗ್ಲೋ-ಮೈಸೂರು ಯುದ್ಧದ ಹಿನ್ನೆಲೆ

- ಇಂಗ್ಲಿಷರ ಮಿತ್ರನಾಗಿದ್ದ ತಿರುವಾಂಕೂರು ರಾಜನ ಮೇಲೆ ಟಿಪ್ಪು ಆಕ್ರಮಣ ನಡೆಸಿದಾಗ, ಇವನ ಮೇಲೆ ಯುದ್ಧ ಮಾಡಲು ಇಂಗ್ಲಿಷರಿಗೆ ಒಂದು ನೆವ ದೊರಕಿದಂತಾಯಿತು.
- ಟಿಪ್ಪುವಿನ ವಿರುದ್ಧ ಅವರು ಮರಾಠರನ್ನೂ ನಿಜಾಮನನ್ನೂ ಎತ್ತಿಕಟ್ಟಿದರು.
- ಟಿಪ್ಪು ತಮ್ಮೆಲ್ಲರಿಗೂ ಮಹಾ ಅಪಾಯಕಾರಿ ಶತ್ರು. ಎಂದು ಅವರಿಗೆ ಬೋಧಿಸಿದರು.
- ಗವರ್ನರ್-ಜನರಲ್ ಕಾರ್ನ್‌ವಾಲಿಸನ ಕುತಂತ್ರವನ್ನು ಬೇಹುಗಾರರಿಂದ ಅರಿತುಕೊಂಡ ಟಿಪ್ಪು ಮರಾಠರ ಬಳಿಗೂ ನಿಜಾಮನ ಆಸ್ಥಾನಕ್ಕೂ ತನ್ನವರನ್ನು ಕಳಿಸಿ, ಅವರ ತಂತ್ರವನ್ನು ಮುರಿಯಲು ಯತ್ನಿಸಿದ.
- ಆದರೆ ಪ್ರಯತ್ನ ಫಲಿಸಲಿಲ್ಲ.

# ಯುದ್ಧದ ಗತಿ ಮತ್ತು ಒಪ್ಪಂದ

- ಮೂವರು ಮಿತ್ರರ ಕೂಟದ ಎದುರು ಟಿಪ್ಪುವಿನ ಬಲ ಕಡಿಮೆಯಾಯಿತು.
- ಗ.ಜ. ಲಾರ್ಡ್ ಕಾರ್ನ್‌ವಾಲಿಸ್ ಮರಾಠರ ಹಾಗೂ ನಿಜಾಮನ ಸೈನ್ಯ ಸಹಾಯದೊಡನೆ ಬೆಂಗಳೂರಿನ ಮೇಲೆ ದಾಳಿಯಿಟ್ಟು ಅದನ್ನು 1791ರಲ್ಲಿ ವಶಪಡಿಸಿಕೊಂಡ.
- ಮುಂದೆ ಅವನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ.
- ಟಿಪ್ಪು ಬೇರೆ ದಾರಿಯಿಲ್ಲದೆ ಸರ್ವನಾಶವನ್ನು ತಪ್ಪಿಸಿಕೊಳ್ಳಲು ಇಂಗ್ಲಿಷರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತು.
- ಒಪ್ಪಂದದ ಷರತ್ತುಗಳಂತೆ ಸುಲ್ತಾನ ತನ್ನ ರಾಜ್ಯದ ಅರ್ಧಭಾಗವನ್ನು ಶತ್ರುಗಳಿಗೆ ಬಿಟ್ಟುಕೊಟ್ಟು, ಯುದ್ಧದ ವೆಚ್ಚಕ್ಕೆಂದು ಮೂರು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ದಂಡ ತೆರಬೇಕಾಯಿತು.
- ವೆಚ್ಚ ಪಾವತಿಯಾಗುವವರೆಗೆ ಇಬ್ಬರು ಮಕ್ಕಳಾದ ಅಬ್ದುಲ್ ಮಲ್ಲಿಕ್ ಮತ್ತು ಮೊಹದೀನ್‌ರನ್ನು ಇಂಗ್ಲಿಷರಲ್ಲಿ ಒತ್ತೆ ಇಡಬೇಕಾಯಿತು.

# ಮಕ್ಕಳನ್ನು ಒತ್ತೆಯಾಳಾಗಿ ಕಳುಹಿಸುತ್ತಿರುವುದು



# ವಿದೇಶಗಳೊಂದಿಗೆ ರಾಯಭಾರ

- ಟಿಪ್ಪುವಿಗೆ ತಡೆಯಲಾಗದ ಅಪಮಾನ.
- ಇಂಗ್ಲಿಷರನ್ನು ಭಾರತದ ನೆಲದಿಂದ ಓಡಿಸಲು ಸಂಕಲ್ಪ.
- ಈ ಕಾರ್ಯಕ್ಕೆ ತನ್ನ ಸರ್ವಶಕ್ತಿಯ ಮೀಸಲು.
- ಈ ಕಾರ್ಯದಲ್ಲಿ ನೆರವಾಗಲು ಅನೇಕ ದೇಶೀಯ ಅರಸರೊಡನೆ ಪತ್ರವ್ಯವಹಾರ.
- ಆಫ್ಘಾನಿಸ್ಥಾನದ ಜಮಾನ್ ಷಾ, ಫ್ರಾನ್ಸಿನ ನೆಪೋಲಿಯನನ ಬಳಿಗೂ ರಾಯಭಾರ
- ಶ್ರೀರಂಗಪಟ್ಟಣದಲ್ಲಿ ಫ್ರೆಂಚರ ನೆರವಿನಿಂದ ಜಾಕೊಬಿನ್ ಕ್ಲಬ್ ಸ್ಥಾಪನೆ.
- ನೆಪೋಲಿಯನ್ ಟಿಪ್ಪುಸುಲ್ತಾನನಿಗೆ ನೆರವಾಗಲು ಸೈನ್ಯದೊಡನೆ ಬರುವುದಾಗಿ ಆಶ್ವಾಸನೆ
- ಆದರೆ ನೆಪೋಲಿಯನ್ ಸಹಾಯಕ್ಕೆ ಬರಲಿಲ್ಲ!
- ಫ್ರೆಂಚರ ನೆರವಿನಿಂದ ಇಂಗ್ಲಿಷರನ್ನು ಭಾರತದಿಂದ ಹೊರಗಟ್ಟುವ ಟಿಪ್ಪು ಸುಲ್ತಾನನ ಕನಸು ಕನಸಾಗಿಯೇ ಉಳಿಯಿತು.

# ನಾಲ್ಕನೆ ಆಂಗ್ಲೊ-ಮೈಸೂರು ಯುದ್ಧ - ೧೭೯೯

- ಇಂಗ್ಲಿಷರ ಆಶ್ರಿತನಾಗಿರಲು ಒಪ್ಪದ ಟಿಪ್ಪುವಿನ ಮೇಲೆ ಯುದ್ಧ ಮಾಡಲು ಲಾರ್ಡ್ ವೆಲ್ಲೆಸ್ಲಿ ತೀರ್ಮಾನಿಸಿ, ಮೈಸೂರಿನ ಮೇಲೆ ದಂಡೆತ್ತಿ ಹೋಗಲು ಜನೆರಲ್ ಹ್ಯಾರಿಸನಿಗೆ ಆಜ್ಞೆ.
- ಮರಾಠರೂ, ನಿಜಾಮನೂ ಇಂಗ್ಲಿಷರಿಗೆ ನೆರವಾದರು.
- ಸಿದ್ಧೇಶ್ವರ, ಮಳವಳ್ಳಿಯ ಬಳಿಯ ಕದನಗಳಲ್ಲಿ ಟೀಪೂವಿಗೆ ಸೋಲಾಯಿತು.
- ಇಂಗ್ಲಿಷರು ಶ್ರೀರಂಗಪಟ್ಟಣದ ಕೋಟೆಗೆ ಮುತ್ತಿಗೆ ಹಾಕಿದರು.
- ಪೂರ್ವದಿಕ್ಕಿನಿಂದ ಅದನ್ನು ಪ್ರವೇಶಿಸಿದರು.

# ಟಿಪ್ಪುವಿನ ಅಂತ್ಯ

- ಮಧ್ಯಾಹ್ನದ ಊಟಕ್ಕೆ ಕುಳಿತಿದ್ದ ಟೀಪೂ ನಡುವೆಯೇ ಎದ್ದು ಕೋಟೆಯ ರಕ್ಷಣೆಗೆ ಧಾವಿಸಿದ.
- ಅವನು ತನ್ನ ಸೈನಿಕರನ್ನು ಹುರಿದುಂಬಿಸುತ್ತ. ಕತ್ತಿ ಹಿರಿದು ಹೋರಾಡುತ್ತಲೇ ಶತ್ರುಗಳ ಗುಂಡಿಗೆ ಬಲಿಯಾಗಿ ನೆಲಕ್ಕುರುಳಿದ (1799ರ ಮೇ 4).
- ಸಾಮಾನ್ಯ ಸೈನಿಕನಂತೆ ಹೋರಾಡಿ ಮಡಿದ ಸುಲ್ತಾನನ ಪಾರ್ಥಿವ ದೇಹವನ್ನು ಹುಡುಕಿ ತೆಗೆಯುವುದೇ ಇಂಗ್ಲಿಷ್ ಸೈನಿಕರಿಗೆ ಕಷ್ಟವಾಯಿತು.
- ಹೆಣಗಳ ರಾಶಿಯ ನಡುವೆ ಇದ್ದ ಅವನ ಶವವನ್ನು ಸಕಲ ರಾಜ ಮರ್ಯಾದೆಗಳೊಂದಿಗೆ ಶ್ರೀರಂಗಪಟ್ಟಣದ ಕೋಟೆಯಲ್ಲಿ ಹೈದರ್ ಆಲಿಯ ದೇಹದ ಪಕ್ಕದಲ್ಲಿ ಹೂಳಲಾಯಿತು.

# ಶ್ರೀರಂಗಪಟ್ಟಣದ ಮುತ್ತಿಗೆ



# ಯುದ್ಧೋತ್ತರ ಘಟನೆಗಳು

- ರಾಜ್ಯದ ಒಂದು ಭಾಗವನ್ನು ಇಂಗ್ಲಿಷರೂ ಮರಾಠರೂ ನಿಜಾಮನೂ ತಮ್ಮಲ್ಲೇ ಹಂಚಿಕೊಂಡು ಉಳಿದ ಭಾಗವನ್ನು ಮೈಸೂರು ಅರಸುಮನೆತನದವರಿಗೆ ಕೊಟ್ಟರು.
- ಈ ಘಟನೆಯನ್ನು ಏನೆಂದು ಕರೆಯಲಾಗಿದೆ?

# ಶತೃಗಳಿಗೆ ದೊರೆತ ಸಂಪತ್ತು ಎಷ್ಟು ಗೊತ್ತೆ?

- ರಾಜಭಂಡಾರದಲ್ಲಿ ಬಗೆಬಗೆಯ ಬೆಲೆಬಾಳುವ ನಗನಾಣ್ಯ ವಸ್ತ್ರಗಳು ಇದ್ದವು.
- ಅರಮನೆಯಲ್ಲಿ 11,43,216 ಪೌಂಡು ಬೆಲೆಯ ಸಂಪತ್ತು ದೊರಕಿತು.
- ದೂರದರ್ಶಕ ಯಂತ್ರಗಳೂ ನಿಲುವುಗನ್ನಡಿಗಳೂ ಬಗೆಬಗೆಯ ಯಂತ್ರೋಪಕರಣಗಳೂ ಸಿಕ್ಕವು.
- ಶ್ರೀರಂಗಪಟ್ಟಣ ಒಂದರಲ್ಲೇ 1,000 ತೋಪುಗಳೂ 5 ಲಕ್ಷ ಬಂದೂಕಿನ ಗುಂಡುಗಳೂ 60,000 ಬಂದೂಕುಗಳೂ ದೊರೆತವು
- ಅರಮನೆಯ ಆವರಣದಲ್ಲಿ ಬತ್ತ, ರಾಗಿ, ಸಾಂಬಾರ ವಸ್ತುಗಳಿಂದ ತುಂಬಿದ ಇಪ್ಪತ್ತು ಧಾನ್ಯದ ಮಳಿಗೆಗಳೂ ಸಿಕ್ಕವು.
- ಪುಸಕ ಭಂಡಾರದಲ್ಲಿ ಹಲವು ವಿಷಯಗಳಿಗೆ ಸಂಬಂಧಪಟ್ಟ ಅಮೂಲ್ಯ ಗ್ರಂಥಗಳು ಸಿಕ್ಕವು.

# ವ್ಯಕ್ತಿತ್ವದ ವಿಶ್ಲೇಷಣೆ

- ಟಿಪ್ಪು ಸರಳ ಜೀವನ ನಡೆಸುತ್ತಿದ್ದ.
- ಆಹಾರವಿಹಾರಗಳಲ್ಲಿ ಹಿತಮಿತವಾಗಿದ್ದು ಇತರರಿಗೆ ಆದರ್ಶವಾಗಿದ್ದ.
- ಜ್ಞಾನ, ವಿಜ್ಞಾನ, ಸಂಗೀತ, ನೃತ್ಯಗಳಲ್ಲಿ ಅಭಿರುಚಿಯಿತ್ತು.
- ದಕ್ಷ  ಆಡಳಿತಗಾರ.
- ಮೈಸೂರನ್ನು ಪ್ರಗತಿಪರವನ್ನಾಗಿ ಮಾಡಲು ಶ್ರಮಿಸಿದ.
- ರಾಜ್ಯದಲ್ಲಿ ಅನೇಕ ರಸ್ತೆಗಳನ್ನೂ ಕೆರೆಗಟ್ಟೆಗಳನ್ನೂ ನಿರ್ಮಿಸಿದ.
- ಐರೋಪ್ಯರಿಂದ ಸ್ಫೂರ್ತಿ ಹೊಂದಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿದ.
- ಸುಮಾರು 5' 8' ಎತ್ತರದ ಭವ್ಯವಾದ ನಿಲುವು; ಎಣ್ಣೆಗೆಂಪು ಬಣ್ಣ; ವಿಶಾಲವಾದ ಮುಖ; ದೊಡ್ಡದಾದ ಕಣ್ಣುಗಳು; ಕಮಾನಿನಂತಿದ್ದ ಹುಬ್ಬುಗಳು; ನಸುಬಾಗಿದ ಮೂಗು; ಪೌರುಷಯುಕ್ತವಾದ ನಡೆನುಡಿಗಳು.